ಪ್ರಜ್ಞೆ ಮೂಡಿಸಲು ನಾವೆಲ್ಲಾ ಪ್ರಯತ್ನ ಮಾಡಬೇಕು. ಸವರ್ಣೀಯರಲ್ಲಿ ಈ ಒಂದು ಮನೋವೃತ್ತಿ ಬೆಳೆಯಬೇಕು. ಅದೇ ರೀತಿಯಲ್ಲಿ ದಲಿತರಲ್ಲಿಯೂ ಕೂಡ ಅದು ನಮ್ಮ ಹಕ್ಕು ಆ ಹಕ್ಕನ್ನು ನಾವು ಶಾಂತಿ ರೀತಿಯಿಂದ ಪಡೆದುಕೊಳ್ಳಬೇಕೆಂಬ ಭಾವನೆ ಬರಬೇಕು. ನಿನ್ನೆಯ ದಿವಸ ಅಲ್ಲಿನ ಶಾಸಕರು ನನಗೆ ಹೇಳಿದರು, ಅದನ್ನು ನಾನು ಇಲ್ಲಿ ಉಲ್ಲೇಖ ಮಾಡುವುದಿಲ್ಲ. ಘಟನೆ ನಡೆದ ಸ್ಥಳಕ್ಕೆ ಎಸ್.ಐ. ಹೋದಾಗ ದಲಿತ ಯುವಕರು ಆ ಎಸ್. ಐ. ಮೇಲೆ ಹಲ್ಲೆ ಮಾಡಿದ್ದಾರೆ. ಇದು ಸರಿಯಲ್ಲ. ಆದ್ದರಿಂದಲೇ ನಾವು ಈ ಬಗ್ಗೆ ನಮ್ಮ ಸಮಾಜದಲ್ಲಿ ಪ್ರಜ್ಞೆ ಮೂಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಎಂದು ಹೇಳುವುದು ಇದರಲ್ಲಿ ಸರ್ಕಾರದ ಕರ್ತವ್ಯವೂ ಸಹ ಇದೆ. ಅದಕ್ಕೆ ನಾವು ಕಾನೂನು ತಿದ್ದುಪಡಿ ಮಾಡಬೇಕಾಗಿದೆ, ಕಾನೂನು ತಿದ್ದುಪಡಿ ಮಾಡುತ್ತೇವೆ. ಅದನ್ನು ನಾವು ಈಗ ಪರಿಶೀಲನೆ ಮಾಡುತ್ತಿದ್ದೇವೆ, ಮಾಡಬಾರದೆಂದು ಏನೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಪ್ರೊಸೀಡಿಂಗ್ಸ್ ತರಿಸಿ ನೋಡಿ. Assurances were given thrice. Please go thourgh the procedings of this House. Ultimately I am bringing a Private Members Bill.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಯುನಿಯನ್ ಹೋಮ್ ಮಿನಿಸ್ಟರ್ ಜೊತೆ ಚರ್ಚೆ ಮಾಡಿದ್ದೇನೆ. ರಾಷ್ಟ್ರದಲ್ಲಿ ಇಂತಹ ಒಂದು ಕಾನೂನು ಬೇಕು. ನಾವು ರಾಜ್ಯದಲ್ಲಿಯೂ ಸಹ ಮಾಡುತ್ತೇವೆಂದು ಹೇಳಿದ್ದೇನೆ. ಆದಕ್ಕೆ ನಾನು ಪರಿಶೀಲನೆ ಮಾಡುತ್ತಿದ್ದೇನೆ. ನೀವು ಪ್ರೈವೇಟ್ ಮೆಂಬರ್ಸ್ ಬಿಲ್ ತಂದರೆ ಏನೂ, ಸರ್ಕಾರ ತಂದರೆ ಏನು? ಇಲ್ಲಿ ನಾವು ಕಾನೂನು ಮಾಡತಕ್ಕಂಥದ್ದು ಒಂದು. ಮತ್ತು ನಿನ್ನೆ ಹೇಳಿದ ವಿಚಾರ ಪುನ: ನಾನು ಇಲ್ಲಿ ಹೇಳುವುದು ಬೇಡ. ಇನ್ನು ಗೂಂಡಾಗಿರಿ ಯಾರ ಮೇಲೆ ಮಾಡಲಿ—ದಲಿತರ ಮೇಲೆ ಆಗಲಿ, ಸವರ್ಣೀಯರ ಮೇಲೆ ಆಗಲಿ, ಯಾರ ಮೇಲೆ ಗೂಂಡಾಗಿರಿ ಮಾಡಿದರೂ ಸಹ ಕ್ರಮ ಕೈಗೊಳ್ಳಲೇಬೇಕಾಗುತ್ತದೆ. ಗೂಂಡಾಗಿರಿಗೆ ಜಾತಿ ಇಲ್ಲ, ಸರ್ಕಾರ ಕಾನೂನನ್ನು ಜಾರಿ ಮಾಡಲೇಬೇಕು. ಅದರಲ್ಲಿ ಸರ್ಕಾರ ಹಿಂದು ಮುಂದು ನೋಡುವುದಿಲ್ಲ. ಇನ್ನು ತಾವು ಕಾನೂನು ತಿದ್ದುಪಡಿ ಮಾಡಬೇಕೆಂದು ಹೇಳಿದ್ದೀರಿ. ಆ ಬಗ್ಗೆ ನಾನು ಪರಿಶೀಲನೆ ಮಾಡುತ್ತಿದ್ದೇನೆ. ದಲಿತರ ಬಗ್ಗೆ ದಲಿತ ನಾಯಕರಿಗೆ ಎಷ್ಟು ಅನುಕಂಪ ಇದೆಯೋ ಅದಕ್ಕಿಂತ ಹೆಚ್ಚು ಅನುಕಂಪ ಸರ್ಕಾರಕ್ಕೆ ಇದೆ. ಮತ್ತು ಅವರಿಗೆ ನ್ಯಾಯ ಕೊಡುವುದರಲ್ಲಿ ಹಿಂದೆ ಮುಂದು ನೋಡುವುದಿಲ್ಲ ಇನ್ನು ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ ಅದೇನೆಂದರೆ ಮಾನ್ಯ ಖರ್ಗೆಯವರು ಲ್ಯಾಂಡ್ ಅಕ್ವೈರ್ ಮಾಡಿರುವ ಬಗ್ಗೆ ಹೇಳಿದ್ದಾರೆ, ಊರ ಮುಂದೆ ಆ ಲ್ಯಾಂಡ್ ಇದೆ ಎಂದು ಕೆಲವರು ಅಡ್ಡಿ ಮಾಡುತ್ತಿದ್ದಾರೆ, ಅದನ್ನು ಅವರಿಗೆ ಕೊಡಬೇಕೆಂದು ಹೇಳಿದ್ದಾರೆ, ಆ ಬಗ್ಗೆ ಸರ್ಕಾರ ಯೋಚನೆ ಮಾಡಿ ಕ್ರಮ ಕೈಗೊಳ್ಳುತ್ತದೆ: ಮತ್ತು ಪಂಚಕಟ್ಟಿಸಿಕೊಡಲಿಕ್ಕೆ ಹೇಳಿದ್ದಾರೆ ಅದನ್ನು ಮಾಡೋಣ. ಇನ್ನು ಮುಂದೆ ಎಲ್ಲಿ ನಾವು ಮನೆಗಳನ್ನು ಹೆಂಚುತ್ತೇವೆಯೋ ಅಲ್ಲಿ ಈ ವರ್ಗದವರಿಗೆ ಆದ್ಯತೆ ಕೊಡಬೇಕೆಂದು ಇದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದು ತಮ್ಮಲ್ಲಿಯೇ ಸ್ಟೇ ಆಗಿದೆ. ಎ.ಸಿ.ಯವರು ಬಂದು ರಿಕ್ವೆಸ್ಟ್ ಮಾಡಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿನ್ನೆ ಹೇಳಿದ್ದಾರೆ. ನಾನು ನೋಡಿ ಕ್ರಮ ಕೈಗೆದುಕೊಳ್ಳುತ್ತೇನೆ. ಇಂತಹ ಘಟನೆಗಳು ನಡೆಯಬಾರದೆನ್ನುವ ಪ್ರಜ್ಞೆ ಮೂಡಿಸಬೇಕಾಗುತ್ತದೆ. ಅವರ ಮೇಲೆ ಇವರ ಮೇಲೆ ಎಂದು ನಾನು ಹೇಳುವುದಿಲ್ಲ: ಎಲ್ಲರೂ ಕೂಡಿ ಈ ಕೆಲಸವನ್ನು ಮಾಡಬೇಕು. ನಾನು ನಿಮ್ಮ ಸಹಕಾರವನ್ನು ಕೇಳುತ್ತಿದ್ದೇನೆ. ಇದರಲ್ಲಿ ನಮ್ಮ ಸರ್ಕಾರದ ಜವಾಬ್ದಾರಿ ಹೆಚ್ಚು ಇದೆ. ಇದಕ್ಕೆ ನಿಮ್ಮ ಸಹಕಾರ ಬೇಕು. ಅವರಿಗೆ ಸೂಕ್ತ ತಿಳುವಳಿಕೆ ಕೊಡಲು ನಮ್ಮ ಸರ್ಕಾರ ಪ್ರಯತ್ನ ಮಾಡಿದೆ. ಅಲ್ಲಿ ತಿಳಿ ವಾತಾವರಣವನ್ನು ಮೊದಲು ನಿರ್ಮಾಣ ಮಾಡೋಣ. ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದರೆ ನಮ್ಮ ಸಂಸ್ಕೃತಿ, ತಾಳ್ಮೆ, ಸಹನೆ ಹೆಚ್ಚು ಇದೆ. ಈ ಬಗ್ಗೆ ತಾವು ಹೇಳಿದ ಎಲ್ಲಾ ವಿಚಾರಗಳ ಬಗ್ಗೆ ನಾನು ಕ್ರಮ ಕೈಗೊಳ್ಳುತ್ತೇನೆ.

(ii) ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ಹಳೆಯ ಹುಬ್ಬಳ್ಳಿ ಭಾಗದಲ್ಲಿ ಕಟ್ಟಡಗಳನ್ನು ಕೆಡವಿ ಹಾಕಿರುವ ಬಗ್ಗೆ

ಶ್ರೀ ಎಂ. ಎಂ. ಹಿಂಡಸಗೇರಿ.—ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರವು ಹಳೇ ಹುಬ್ಬಳ್ಳಿ ಭಾಗದಲ್ಲಿ ಕಟ್ಟಡಗಳನ್ನು ಕೆಡವಿ ಹಾಕಿರುವ ಬಗ್ಗೆ ನಾನು ಮಾನ್ಯ ಪಶಾತಿ ಮತ್ತು ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಮಾಜ ಕಲ್ಯಾಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಾನು ವಸತಿ ಮತ್ತು ನಗರಾಭಿವೃದ್ಧಿ ಸಚಿವರ ಪರವಾಗಿ, ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ.

ಕಂದಾಯ ಇಲಾಖೆಯ ದಾಖಲೆಗಳಂತೆ, ಹುಬ್ಬಳ್ಳಿ ತಾಲ್ಲೂಕು ಅಯೋಧ್ಯ ಗ್ರಾಮದ ರಿ.ಸ.ನಂ. ೮/೧ರಲ್ಲಿನ ಜಮೀನು ಸರ್ಕಾರದ ಜಮೀನಾಗಿರುತ್ತದೆ, ಹುಬ್ಬಳ್ಳಿ ಭೂನ್ಯಾಯ ಮಂಡಲಿಯು ತನ್ನ ಆದೇಶದ ದಿನಾಂಕ ೧೯-೯-೧೯೭೭ರಲ್ಲಿ ಅಯೋಧ್ಯ ಗ್ರಾಮದ ರಿ.ಸ.ನಂ. ೮/೧ರಲ್ಲಿನ ಜಮೀನನ್ನು ಶ್ರೀ ಕೋಳೆಕರ ಮಧುಕರ ಲಕ್ಷ್ಮಣರಾವ್ ಇವರಿಗೆ ಅಧಿಭೋಗದಾರರೆಂದು ಹಕ್ಕನ್ನು ನೀಡಿರುತ್ತದೆ. ಕರ್ನಾಟಕ ಭೂ-ಸುಧಾರಣೆಯ ಅಧಿನಿಯಮದ ಪ್ರಕಾರ ಅಧಿಭೋಗದಾರರನ್ನು ೧೫ ವರ್ಷಗಳವರೆಗೆ ಜಮೀನನ್ನು ವರ್ಗಾಯಿಸಬಾರದು. ಮಾರಬಾರದು.

ಅಧಿಭೋಗದಾರರು ಭೂನ್ಯಾಯ ಮಂಡಲಿಯ ನಿಯಮಗಳನ್ನು ಉಲ್ಲಂಘಿಸಿ, ವಿವೇಶನಗಳನ್ನು ಮಾಡಿ ಸಾರ್ವಜನಿಕರಿಗೆ ಮಾರಾಟ ಮಾಡಿದ್ದಾರೆಂದು ಖಚಿತಪಡಿಸಿಕೊಂಡ ನಂತರ ತಹಶೀಲ್ದಾರರು ಅವರ ಆದೇಶದ ದಿನಾಂಕ ೧೮.೨.೧೯೮೯ರಲ್ಲಿ ಸದರಿ ಜಮೀನನ್ನು ಕಟ್ಟಡಗಳೊಂದಿಗೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿದ್ದಾರೆ.

೧. ಈ ಜಮೀನು ಬಿನ್‌ಶೇತ್ರಿ ಆಗಿರುವುದಿಲ್ಲ.

೨. ಕಟ್ಟಡಗಳ ವಿನ್ಯಾಸ ರೂಪಿಸಿ ಪ್ರಾಧಿಕಾರದ ಅನುಮೋದನೆ ಪಡೆದಿರುವುದಿಲ್ಲ.

೩. ಕಟ್ಟಡಗಳ ಪ್ರಾರಂಭಿಕ ಪ್ರಮಾಣ ಪತ್ರ ಪಡೆದುಕೊಂಡಿರುವುದಿಲ್ಲ.

ಸದರೀ ಜಮೀನಿನಲ್ಲಿ ದಿನೇ ದಿನೇ ಅನಧಿಕೃತ ಕಟ್ಟಡಗಳು ಬರುವುದನ್ನು ಕಂಡು ಸದರೀ ಕಟ್ಟಡಗಳನ್ನು ಒಡೆದು ಹಾಕಲು ತೀರ್ಮಾನಿಸಲಾಯಿತು.

ದಿನಾಂಕ ೨೩-೩-೧೯೮೯ರಂದು ಅನಧಿಕೃತ ಕಟ್ಟಡಗಳನ್ನು ಒಡೆದು ಹಾಕಲಾಯಿತು. ಒಡೆದು ಹಾಕುವಾಗ ಯಾವುದೇ ಅಹಿತಕರ ಘಟನೆ ನಡೆದಿರುವುದಿಲ್ಲ

ಇಂತಹ ಅನಧಿಕೃತ ಕಟ್ಟಡಗಳಿಂದ ನಗರದಲ್ಲಿ ಬರುವ ಕೊಳಚೆ ಪ್ರದೇಶ ನಿರ್ಮಾಣವಾಗುವುದನ್ನು ತಡೆಗಟ್ಟುವ ಉದ್ದೇಶದಿಂದ ಹಾಗೂ ಸರ್ಕಾರದ ವತಿಯಿಂದ ಈ ಜಾಗದಲ್ಲಿ ಅಭಿವೃದ್ಧಿ ಯೋಜನೆಯನ್ನು ಕೈಗೆತ್ತಿಕೊಳ್ಳುವ ಉದ್ದೇಶದಿಂದ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಎಂ. ಎಂ. ಹಿಂಡಸಗೇರಿ.—ಮಾನ್ಯ ಅಧ್ಯಕ್ಷರೆ. ಮಾನ್ಯ ಮಂತ್ರಿಗಳು ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಈ ಜಮೀನು ಶಹರದ ಮಧ್ಯದಲ್ಲಿದೆ. ಹಳೆಯ ಹುಬ್ಬಳ್ಳಿ, ಮಧ್ಯದಲ್ಲಿ ಬರುವ ಈ ಜಾಗದಲ್ಲಿ ಬಡವರು, ಹಿಂದುಳಿದ ವರ್ಗದವರು, ಹಾಗೂ ಅಲ್ಪಸಂಖ್ಯಾತರು ವಾಸವಾಗಿದ್ದಾರೆ. ಈ ಜಮೀನು ಕೋಳೆಗೇರಿ ಜಮೀನು ಎಂದು ವರದಿಯಲ್ಲಿ ಹೇಳಿದ್ದಾರೆ. ಅಲ್ಲಿ ಸುಮಾರು ಒಂದು ವರ್ಷದಿಂದ ಸಣ್ಣ ಸಣ್ಣ ಮನೆಗಳನ್ನು ಮತ್ತು ಜೋಪಡಿಗಳನ್ನು ಹಂತಹಂತವಾಗಿ ಕಟ್ಟಿದ್ದಾರೆ. ಈ ರೀತಿ ಕಟ್ಟುವಾಗ ಎಲ್ಲಾ ಸರ್ಕಾರಿ ಅಧಿಕಾರಿಗಳು, ಅಂದರೆ ರೆವಿನ್ಯೂ ಅಧಿಕಾರಿಗಳಾಗಲಿ, ಕಾರ್ಪೋರೇಷನ್ ಕಮಿಷನರ್ ಆಗಲಿ, ಅಲ್ಲಿನ ಡೆವಲಪ್‌ಮೆಂಟ್ ಅಥಾರಿಟಿಯವರಾಗಲಿ, ನೋಡದೆ, ಸುಮ್ಮನೆ ಇದ್ದು ಈಗ ಒಮ್ಮೆಲೆ ಕ್ರಮ ತೆಗೆದುಕೊಂಡಿದ್ದಾರೆ. ಇದರ ಬದಲು ಅಲ್ಲಿ ನಾಲ್ಕಾರು ಮನೆಗಳು ಬಂದಾಗ ಅವರಿಗೆ ನೋಟೀಸು ಕೊಟ್ಟು ಕಟ್ಟಡಗಳು ಬರುವುದನ್ನು ನಿಲ್ಲಿಸಿದ್ದರೆ, ನೂರಾರು ಮನೆಗಳನ್ನು ಜನರು ಕಟ್ಟುವುದನ್ನು ನಿಲ್ಲಿಸುತ್ತಿದ್ದರು. ಆದರೆ, ಒಂದು ವರ್ಷದವರಗೆ ನೀವು ಸುಮ್ಮನಿದ್ದು ಈಗ ಅದು ಕೋಳೆಗೇರಿ ಜಮೀನೆಂದು ಈ ನಾಲ್ಕು ದಿವಸಗಳಲ್ಲಿ...

ಅಧ್ಯಕ್ಷರು,—ತಾವು ಕ್ಲಾರಿಫಿಕೇಷನ್ ಕೇಳಿ ಭಾಷಣ ಮಾಡಬೇಡಿ.

ಶ್ರೀ ಎಂ. ಎಂ. ಹಿಂಡಸಗೇರಿ.—ಮಾನ್ಯ ಅಧ್ಯಕ್ಷರೆ, ನಾನು ಕ್ಲಾರಿಫಿಕೆ ಷನ್ ಕೇಳುತ್ತಿದ್ದೇನೆ. ಇದರಲ್ಲಿ ಕೆಲವು ರಾಜಕಾರಣಿಗಳು ರೊಕ್ಕ ತಿಂದು, ಬಡವರಿಗೆ, ಹಿಂದುಳಿದ ವರ್ಗದವರಿಗೆ ಹಾಗೂ ಅಲ್ಪ ಸಂಖ್ಯಾತರಿಗೆ ಮೋಸ ಮಾಡಿದ್ದಾರೆ. ಆದ್ದರಿಂದ ಸಿ.ಓ.ಡಿ. ತನಿಖೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ೧೭ ಲಕ್ಷ ರೂಪಾಯಿಗಳನ್ನು ಕೊಟ್ಟು ಈ ಜಮೀನನ್ನು ತೆಗೆದುಕೊಂಡಿದ್ದಾರೆ ಈಗ ಅಲ್ಲಿ ೨೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ, ಬಡವರು ಮನೆಗಳನ್ನು ಕಟ್ಟಿದ್ದರು. ಆದರೆ ನಮ್ಮ ಮಹಾ ನಗರದ ಇತಿಹಾಸದಲ್ಲಿ ಇಂತಹ ಒಂದು ದೊಡ್ಡ ಅನಾಹುತ ಆಗಿರಲಿಲ್ಲ. ಈ ಕಾರಣ ದಿಂದ ತಕ್ಷಣ ಸಿ.ಓ.ಡಿ. ತನಿಖೆಯನ್ನು ಮಾಡಿಸಬೇಕು. ಇದರ ಹಿನ್ನೆಲೆಯಲ್ಲಿ ಯಾವುದೇ ರಾಜಕೀಯ ಪಕ್ಷದವರಿರಲಿ, ಅವರನ್ನು ಕಂಡುಹಿಡಿದು ಅವರಿಗೆ ಶಿಕ್ಷೆಯನ್ನು ಕೊಡಬೇಕು.

೨–೦೦ ಪಿ. ಯಂ.

ಅಲ್ಲಿ ಬಹಳ ಬಡವರು ಮನೆಗಳನ್ನು ಕಟ್ಟಿಕೊಂಡಿದ್ದರು. ಅವರುಗಳಿಗೆ ಮಾನ್ಯೂಚನೆ ನೀಡಿ ಮನೆಗಳನ್ನು ಕೆಡವಿ ಹಾಕಿದ್ದಾರೆ. ಮನೆಗಳನ್ನು ಒಡೆದು ಹಾಕಿದ ಮೇಲೆ ನೊಂದವರಿಗೆ ಬೇರೆ ಪ್ಲಾಟ್‌ಗಳನ್ನು ಕೊಡುವ ವ್ಯವಸ್ಥೆಯನ್ನೂ ಮಾಡಿಲ್ಲ. ಇನ್ನು ಮುಂದಾದರೂ ಬಡವರು ಕಟ್ಟಿರುವ ಮನೆಗಳನ್ನು ಬುಲ್ಡೋಜರ್ ಹಚ್ಚಿ ಕೆಡವ ಬಾರದೆಂದು ಕೇಳಿಕೊಳ್ಳುತ್ತೇನೆ. ಮನೆಗಳನ್ನು ಕೆಡವುವ ಸಂದರ್ಭದಲ್ಲಿ ಲಾ ಅಂಡ್ ಆರ್ಡರ್ ಮೆಯಿಂಟೇನ್ ಮಾಡಬೇಕಾದ ಜವಾಬ್ದಾರಿ ಮುಂದೆ ಪೋಲೀಸ್ ಸಿಬ್ಬಂದಿಯನ್ನು ತೆಗೆದುಕೊಂಡು ಹೋಗಿ ಬಡ ಜನರಿಗೆ ತೊಂದರೆ ಕೊಟ್ಟು ಮನೆಗಳನ್ನು ಕೆಡವಿದ್ದಾರೆ. ಇನ್ನು ಮುಂದಾದರೂ ಇಂಥ ಕೆಲಸಗಳನ್ನು ಮಾಡಬಾರದೆಂದು ನಾನು ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಸಿ.ಓ.ಡಿ., ತನಿಖೆಗೆ ಒಪ್ಪಿಸಬೇಕೆಂದು ಸಹ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ.— ಮಾನ್ಯ ಅಧ್ಯಕ್ಷರೇ, ...

ಅಧ್ಯಕ್ಷರು.— ಟಿ. ಎಸ್. ಮಣಿಯವರೂ ಮಾತನಾಡಿಬಿಡಲಿ. ಒಂದೇ ಸಾರಿ ಉತ್ತರ ಕೊಡ ಬಹುದು. ಅವರೂ ಕೂಡ ಇದಕ್ಕೆ ಸೈನ್ ಹಾಕಿದ್ದಾರೆ.

ಶ್ರೀ ಟಿ. ಎಸ್. ಮಣಿ.— ಮಾನ್ಯ ಅಧ್ಯಕ್ಷರೇ ನಾನೂ ಸಹ ಹುಬ್ಬಳ್ಳಿಗೆ ಹೋಗಿ ಮನೆಗಳನ್ನು ಕೆಡವಿರುವ ಜಾಗವನ್ನು ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಯಾವ ರೀತಿ ಮನೆಗಳನ್ನು ಕೆಡವಿದ್ದಾರೆ ಎಂಬ ಬಗ್ಗೆ ಫೋಟೋಗಳು ಸಹ ಇವೆ. ಮನೆ ಕೆಡವುದರ ಬಗ್ಗೆ ಯಾವುದೇ ರೀತಿಯಲ್ಲೂ ಮುಂಚೆ ನೋಟೀಸ್ ಕೊಟ್ಟಿಲ್ಲ. ಮುಂಚೆ ನೋಟೀಸ್ ಕೊಟ್ಟಿದ್ದಿದ್ದರೆ ಡೆಫನೆಟ್ ಆಗಿ ಅವರು ಆ ಜಾಗವನ್ನು ಖಾಲಿ ಮಾಡುತ್ತಿದ್ದರು. ಮೊದಲೇ ಇನ್‌ಫರ್ಮೇಷನ್ ಕೊಡದೆ ಅಲ್ಲಿ ಮಾರ್ನಿಂಗ್ ಹೋಗಿ ಒಂದು ದಿನ ಎಲ್ಲಾ ಮನೆಗಳನ್ನು ಡಿಸ್‌ಮ್ಯಾಂಟಲ್ ಮಾಡಿದ್ದಾರೆ.

ಅಧ್ಯಕ್ಷರು.— ಸರ್ಕಾರದಿಂದ ಏನು ಎಕ್ಸ್‌ಪೆಕ್ಟ್ ಮಾಡುತ್ತೀರೆಂದು ಕೇಳಿ ಸಾಕು.

ಶ್ರೀ ಟಿ. ಎಸ್. ಮಣಿ,— ಆ ಜಾಗದಲ್ಲಿ ಮನೆಗಳನ್ನು ಕಟ್ಟಿದ್ದವರು ಬಹಳ ಬಡವರು, ಬೀಡಿ ಕಟ್ಟುವವರು, ಬ್ಯಾಕ್‌ವರ್ಡ್ ಕಮ್ಯೂನಿಟಿಯವರು ಇಂಥವರೇ ಅಲ್ಲಿ ಇದ್ದವರು ಮನೆಗಳನ್ನು ಕಳೆದುಕೊಂಡಿರುವವರಿಗೆ ಬೇರೆ ಜಾಗವನ್ನು ಕೊಡಬೇಕು ಹಾಗೂ ಕಾಂಪನ್‌ಸೇಷನ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇಲ್ಲಿ ಏನಾಗಿದೆ ಎಂದರೆ, ಕೆಲವು ಮುಂಖಂಡರುಗಳು, ಬಡವರ ಹತ್ತಿರ ಹಣ ತೆಗೆದುಕೊಂಡು ಈ ಜಾಗದಲ್ಲಿ ಮನೆಗಳನ್ನು ಕಟ್ಟಿಸಿಕೊಳ್ಳಿ, ಆ ಜಾಗವನ್ನು ನಿಮ್ಮ ನಿಮ್ಮಗೇ ಮಾಡಿಸಿಕೊಡುತ್ತೇನೆಂದು ಹೇಳಿ ಹಣವನ್ನು ಪಡೆದಿದ್ದಾರೆ. ಮನೆಗಳನ್ನು ಕಟ್ಟಿಯಾದ ಮೇಲೆ, ಪ್ರಾಪರ್ ಲೀ ಔಟ್ ಆಗಿಲ್ಲವೆಂದು ಗೌರ್ನಮೆಂಟ್‌ನವರು ಡಿಪ್ರಾಲಿಷ್ ಮಾಡಿದ್ದಾರೆ. ಒಂದು ಕಡೆ ಸೈಟಿಗೆ ದುಡ್ಡು ಕೊಟ್ಟಿದ್ದು ಹೋಯಿತು, ಇನ್ನೊಂದು ಕಡೆ ಮನೆ ಕಟ್ಟಿಸುವುದಕ್ಕೆ ಖರ್ಚು ಮಾಡಿದ ಹಣವೂ ಹೋಯಿತು. ಆದ್ದರಿಂದ, ಈ ಸೈಟುಗಳಲ್ಲಿ ಮನೆಗಳನ್ನು ಕಟ್ಟಿಸಿಕೊಳ್ಳಿ, ಅದನ್ನು ನಾವು ರೆಗ್ಯುಲರೈಸ್ ಮಾಡಿಸಿಕೊಡುತ್ತೇವೆಂದು ಹೇಳಿರುವವರ ಮೇಲೆ ಏನು ಆ್ಯಕ್ಷನ್ ತೆಗೆದುಕೊಳ್ಳುತ್ತೀರಿ ? ನೀವು ಆ್ಯಕ್ಷನ್ ತೆಗೆದುಕೊಳ್ಳಬೇಕಾದರೆ ಸಿ.ಓ.ಡಿ ಎನ್‌ಕ್ವೈರಿ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ ಯಾರು ಯಾರು ಇದರಲ್ಲಿ ಸೇರಿದ್ದಾರೆಂದು ಎನ್‌ಕ್ವೈರಿ ಮಾಡಿದರೆ ಗೆ ಇತ್ಯಾಗುತ್ತದೆ,

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೇ, ಇದರಲ್ಲಿ ದುರ್ವ್ಯವಹಾರ ನಡೆದಿದೆ, ಅವ್ಯವಹಾರ ನಡೆದಿದೆ ಎಂದು ಮಾನ್ಯ ಸದಸ್ಯರುಗಳು ಹಾಗೂ ಮಾನ್ಯ ವಿರೋಧ ಪಕ್ಷದ ಉಪ ನಾಯಕರು ಹೇಳಿದ್ದಾರೆ. ಇದರ ಬಗ್ಗೆ ವಿಚಾರಣೆ ಮಾಡಿಸೋಣ. ಸಕ್ರಮವಾಗಿ ಕಟ್ಟಿಸಿರತಕ್ಕಂಥ ಯಾವ ಕಟ್ಟಡಗಳನ್ನೂ ಇದುವರೆಗೆ ಬೀಳಿಸಿಲ್ಲ. ಈ ಜಮೀನು ವಿಚಾರವಾಗಿ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಕೇಸ್ ಇತ್ತು. ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ತೀರ್ಮಾನವಾಗಿ ಈ ಜಮೀನು ವ್ಯವಸಾಯಕ್ಕೆ ಮಾತ್ರ ಉಪಯೋಗಿಸಬೇಕೆಂದು ತಿಳಿಸಲಾಗಿತ್ತು. ಆದರೆ ಆ ಜಮೀನಿನ ಮಾಲೀಕ ವ್ಯವಸಾಯಕ್ಕೆ ಉಪಯೋಗಿಸುವ ಬದಲು ಸೈಟುಗಳನ್ನಾಗಿ ಮಾಡಿ ಮಾರಿದ್ದಾನೆ. ಸೈಟುಗಳನ್ನಾಗಿ ಮಾಡುವುದಕ್ಕೆ ಈ ಜಮೀನು ಕನ್‌ವರ್ಷನ್ ಕೂಡಾ ಆಗಿಲ್ಲ. ಮನೆಗಳನ್ನು ಕಟ್ಟುವಾಗ ಕನ್‌ಸರ್ನ್ಡ್ ಡೆವಲಪ್‌ಮೆಂಟ್ ಅಥಾರಿಟಿಗೂ ತಿಳಿಸಿಲ್ಲ. ಆದರೂ ನಾನು ಹೇಳುತ್ತೇನೆ, ಈ ಜಾಗದಲ್ಲಿ ಯಾರು ಯಾರು ಮನೆಗಳನ್ನು ಕಳೆದುಕೊಂಡಿದ್ದಾರೋ ಅವರುಗಳು ಹುಬ್ಬಳ್ಳಿ ಡೆವಲಪ್‌ಮೆಂಟ್ ಅಥಾರಿಟಿಗೆ ಸೈಟುಗಳನ್ನು ಕೋರಿ ಅರ್ಜಿ ಹಾಕಿಕೊಂಡರೆ ಸೈಟುಗಳನ್ನು ಕೊಡುವ ಸಂದರ್ಭದಲ್ಲಿ ಪ್ರಿಫರೆನ್ಸ್ ಕೊಡುವುದಕ್ಕೆ ಭರವಸೆ

ಕೊಡುತ್ತೇನೆ. ಆ ಮೇಲೆ, ಇದರ ಬಗ್ಗೆ ಇಲಾಖಾ ಮೂಲಕ ತನಿಖೆ ಮಾಡಿಸಿ ಮಾನ್ಯ ಸದಸ್ಯರು ಹೇಳಿರತಕ್ಕಂಥ ವಿಷಯದಲ್ಲಿ ಸತ್ಯಾಂಶ ಇದ್ದರೆ ತಪ್ಪಿತಸ್ಥರ ಮೇಲೆ ಕ್ರಮ ಸಹಿತ ತೆಗೆದುಕೊಳ್ಳುತ್ತೇನೆ.

ಶ್ರೀ ಟಿ. ಎಸ್. ಮಣಿ.— ಹಣವನ್ನು ಕೊಟ್ಟು ಸೈಟುಗಳನ್ನು ಪರ್ಚೇಸ್ ಮಾಡಿ ಮನೆಗಳನ್ನು ಕಟ್ಟಿಬ್ಬರಿಗೆ ಬಹಳ ಲಾಸ್ ಆಗಿದೆ. ಅವರಿಗೆ ಕಾಂಪನ್‌ಸೇಷನ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಂ. ಹಿಂಡಸಗೇರಿ.— ಈ ಜಾಗದಲ್ಲಿ ಮನೆಗಳನ್ನು ಉಳಿಸುವುದಕ್ಕೆ ಡೆವಲಪ್ ಮೆಂಟ್ ಅಥಾರಿಟಿಯವರಿಗೆ ಏನು ಅಧಿಕಾರ ಇದೆ ? ಈ ಜಮೀನು ರೆವಿನ್ಯೂ ಅಥಾರಟಿಗೆ ಸಂಬಂಧ ಪಟ್ಟಿದ್ದಾಗಿರುತ್ತದೆ. ಡೆವಲಪ ಮೆಂಟ ಅಥಾರಿಟಿಯವರು ಬುಲ್ಡೋಜರ್ ಹಚ್ಚಿ ಮನೆಗಳನ್ನು ಕೆಡವುವುದಕ್ಕೆ ಅಧಿಕಾರ ಇಲ್ಲ. ಇದರ ಬಗ್ಗೆ ವಿಚಾರಣೆ ಮಾಡಬೇಕು. ಏಕೆಂದರೆ ಸೆಕ್ಷನ್ ೩೩ರ ಅಡಿಯಲ್ಲಿ ಡೆವಲಪ್‌ಮೆಂಟ್ ಅಥಾರಿಟೀಸ್‌ರವರಿಂದ ನೋಟೀಸ್ ಕೊಟ್ಟಿರಲಿಲ್ಲ. ಆದುದರಿಂದ ಯಾರು ಅಧಿಕಾರಿಗಳು ಇದರ ಹಿಂದೆ ಇದ್ದಾರೆ, ಎಂಬುದನ್ನು ನೋಡಬೇಕು. ಡಿ. ಸಿ ಯವರು ಅಥಾರಿಟಿಯ ಚೇರ್ಮನ್ ಆಗಿರುತ್ತಾರೆ. ಡಿ. ಸಿ. ಯವರು ಆರ್ಡರ್ ಕೊಟ್ಟಿದ್ದಾರೋ, ಅಥವಾ ಕಮಿಷನರ್‌ರವರು ಆರ್ಡರ್ ಕೊಟ್ಟಿದ್ದಾರೋ ಎಂದು ತನಿಖೆ ಮಾಡಬೇಕು. ನಾವು ಸಿ. ಓ. ಡಿ.ತನಿಖೆ ಮಾಡಿಸಬೇಕೆಂದು ಒತ್ತಾಯ ಮಾಡಿದ್ದೆವು. ಆದರೆ ಮಾನ್ಯ ಮಂತ್ರಿಯವರು ಸ್ಪಷ್ಟವಾಗಿ ಆ ಬಗ್ಗೆ ಹೇಳಿಲ್ಲ. ತೊಂದರೆಗೆ ಒಳಗಾದ ಜನರು ಬಹಳ ಬಡವರು, ಹಿಂದುಳಿದವರು, ಬೀಡಿ ಕಾರ್ಮಿಕರು, ಹರಿಜನರು ಮುಂತಾಗಿ ಇದ್ದಾರೆ ಅಲ್ಪ ಸಂಖ್ಯಾತರು ಕೂಡ ಇದ್ದಾರೆ. ಅವರಿಗೆ ಈ ಕಾರಣದಿಂದ ಏನು ನಷ್ಟ ಸಂಭವಿಸಿದೆ ಅದನ್ನು ಸರಕಾರ ತುಂಬಿಸಿ ಕೊಡಬೇಕು ಮತ್ತು ಆ ಸೈಟ್‌ಗಳನ್ನು ಡೆವಲಪ್‌ಮೆಂಟ್ ಮಾಡಿ ಆ ಜನರಿಗೆ ಮಾತ್ರ ಒದಗಿಸಿಕೊಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಅಧ್ಯಕ್ಷರೇ ಅಲ್ಲಿ ಅನಧಿಕೃತವಾಗಿ ಕಟ್ಟಿರತಕ್ಕಂಥ ಕಟ್ಟಡಗಳನ್ನು ಡೆಮಾಲಿಷ್ ಮಾಡಿದ್ದೇವೆ. ಇಲ್ಲಿ ಪರಿಹಾರ ಕೊಡುವ ಪ್ರಶ್ನೆಯು ಉದ್ಭವಿಸುವುದಿಲ್ಲ. ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಬುಲ್ಡೋಜರ್ ಮೂಲಕ ಡೆಮಾಲಿಶ್ ಮಾಡುವ ಸಂದರ್ಭದಲ್ಲಿ ಸೂಕ್ತ ಮಾರ್ಗದಲ್ಲಿ ಆದೇಶ ನೋಟೀಸ್‌ಗಳ ಮೂಲಕ ಮಾಡಿದ್ದಾರೆಯೇ ಎಂದು ಕೇಳಿದ್ದಾರೆ. ಈಗ ಆ ಬಗ್ಗೆ ವಿಚಾರಣೆಯನ್ನು ನಾವು ಸಿ. ಓ. ಡಿ. ಮೂಲಕ ಮಾಡುವುದಕ್ಕೆ ಆಗುವುದಿಲ್ಲ, ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳ ಮೂಲಕ ಇದರ ಬಗ್ಗೆ ಸೂಕ್ತ ವಿಚಾರಣೆಯನ್ನು ಮಾಡಿಸುತ್ತೇನೆ.

ಅಧ್ಯಕ್ಷರು.— ಗಮನ ಸೆಳೆಯುವ ಸೂಚನೆ, ಶ್ರೀ ಕೆ. ಬಿ. ಶಾಣಪ್ಪನವರು.

iii) ಗುಲ್ಬರ್ಗ ಖಾಜಾಬಂದೇನವಾಜ್ ಇಂಜಿನಿಯರಿಂಗ್ ಕಾಲೇಜಿನ ಶಿಕ್ಷಕೇತರರಿಗೆ ವೇತನ ನೀಡದೇ ಇದ್ದುದರಿಂದ ಉಪವಾಸ ಸತ್ಯಾಗ್ರಹ.

ಶ್ರೀ ಕೆ. ಬಿ. ಶಾಣಪ್ಪ.— ಮಾನ್ಯ ಅಧ್ಯಕ್ಷರೇ, ಗುಲ್ಬರ್ಗದ ಖಾಜಾ ಬಂದೇನವಾಜ್ ಇಂಜಿನಿಯರಿಂಗ್ ಕಾಲೇಜಿನ ಶಿಕ್ಷಕೇತರ ನೌಕರರ ಸಂಘದವರಿಗೆ ಸಂಸ್ಥೆಯ ಆಡಳಿತವರ್ಗವು ಕೆ.ಸಿ.ಎಸ್. ಆರ್. ನಿಯಮಗಳ ರೀತ್ಯಾ ಕೆಲಸಕ್ಕೆ ನೇಮಿಸಿಕೊಂಡಿದ್ದಾಗ್ಯೂ ಅವರಿಗೆ ವೇತನ ನೀಡದಿರುವ ಬಗ್ಗೆ ಪ್ರತಿಭಟಿಸಿ ಉಪವಾಸ ಸತ್ಯಾಗ್ರಹ ಕುಳಿತಿರುವ ಬಗ್ಗೆ ಮಾನ್ಯ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಚಂದ್ರಶೇಖರಿರ್ (ಶಿಕ್ಷಣ ಸಚಿವರು).— ಗುಲ್ಬರ್ಗದ ಖಾಜಾ ಬಂದೇನವಾಜ್ ಇಂಜಿನಿಯರಿಂಗ್ ಕಾಲೇಜು, ಅಲ್ಪ ಸಂಖ್ಯಾತರ ಆಡಳಿತ ವರ್ಗಕ್ಕೆ ಸೇರಿದ ಖಾಸಗಿ ಕಾಲೇಜು. ಅಲ್ಲಿಯ ಸಿಬ್ಬಂದಿಯ ಸೇವಾ ವಿಷಯಗಳು ಆಡಳಿತ ವರ್ಗಕ್ಕೆ ಸೇರಿದ್ದಾಗಿರುತ್ತದೆ. ಇದರಲ್ಲಿ ಸರ್ಕಾರದ ಪಾತ್ರವೇನೂ ಇರುವುದಿಲ್ಲ. ಈ ಕಾಲೇಜಿನ ಆಡಳಿತ ವರ್ಗ ಹಾಗೂ ನೌಕರರ ಸಮಸ್ಯೆಯಲ್ಲಿ ಸರ್ಕಾರ ಮಧ್ಯೆ ಪ್ರವೇಶಿಸುವುದು ಸಾಧ್ಯವಿಲ್ಲ.

ಆದಾಗ್ಯೂ ಈ ವಿಷಯದಲ್ಲಿ ಸರ್ಕಾರ ಆಡಳಿತ ಮಂಡಳಿಯ ಮತಿಯಿಂದ ವಿವರಗಳನ್ನು ಪಡೆದಿದೆ; ನೋಂದಣಿ ಹೊಂದದ, ಬೋಧಕೇತರ ಸಿಬ್ಬಂದಿ ಸಂಘ ಹಾಗೂ ಆಡಳಿತ ವರ್ಗದ ನಡುವೆ ಭಿನ್ನಾಭಿಪ್ರಾಯ ಉಂಟಾಗಿದೆ. ಬೋಧಕೇತರ ಸಿಬ್ಬಂದಿ ವರ್ಗದವರ ಬೇಡಿಕೆಗಳ ಬಗ್ಗೆ, ಆಡಳಿತ ವರ್ಗ ಮತ್ತು ಸಂಘದ ನಡುವೆ ಮಾತುಕತೆ ನಡೆದಿದ್ದು, ಆಡಳಿತ ವರ್ಗವು ಕೆಲವು ಪರಿಹಾರಗಳನ್ನು ಸೂಚಿಸಿದೆ. ಆದರೆ, ಈ ವಿಷಯದಲ್ಲಿ ಸರ್ಕಾರವು ಮಧ್ಯೆ ಪ್ರವೇಶಿಸಲು ಸಾಧ್ಯವಿಲ್ಲದೇ ಇರುವುದರಿಂದ ಈ ಭಿನ್ನಾಭಿಪ್ರಾಯಗಳನ್ನು, ಆಡಳಿತ ವರ್ಗ ಮತ್ತು ಸಿಬ್ಬಂದಿ ವರ್ಗಗಳ ಮಾತುಕತೆಯಿಂದ ಪರಿಹರಿಸಿಕೊಳ್ಳಬೇಕಾಗುತ್ತದೆ.